**CFC.R.P. 67** ಪ್ರಧಾನ **ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ಕೊಪ್ಪಳ.**

| Form No.4(Civil) Deposition |
|---|

**ಎಸ್.ಸಿ. ನಂಃ 25/2017**

**ಪಿ.ಡಬ್ಲ್ಯೂ ನಂಃ 10**

**ಸಿಡಬ್ಲ್ಯೂ ನಂಃ 16**

**ಸಾಕ್ಷಿಯನ್ನು ದಿನಾಂಕಃ 24-07-2025**

**ರಂದು** ಪ್ರತಿಜ್ಞೆ ಬೋಧಿ**ಸಲಾಯಿತು.**

ಸಾಕ್ಷಿದಾರಳ ಹೆಸರು ಃ ಸಾವಿತ್ರಿ

ತಂದೆಯ ಹೆಸರು ಃ ದ್ಯಾಮಣ್ಣ

ವಯಸ್ಸು ಃ **35** ವರ್ಷ

ಉದ್ಯೋಗ ಃ ಮನೆ ಕೆಲಸ

ವಾಸಸ್ಥಳ ಃ ಕುಷ್ಟಗಿ

ಸಾಕ್ಷಿಯ ಮುಖ್ಯ ವಿಚಾರಣೆ ಃ ಸರ್ಕಾರಿ ಅಭಿಯೋಜಕರಿಂದಾ.

ಈಗ ನ್ಯಾಯಾಲಯದಲ್ಲಿರುವ ಆರೋಪಿಗಳು ನನಗೆ ಗೊತ್ತಿಲ್ಲ. **10** ವರ್ಷಗಳ ಹಿಂದೆ **1**ನೇ ಆರೋಪಿ ನಮ್ಮ ಮನೆಯ ಬಳಿ ವಾಸ ಇರಲಿಲ್ಲ. ನಾನು ಮತ್ತು ಚಾಸಾ **17** ಕಟ್ಟೆಯ ಮೇಲೆ ಕುಳಿತಿದ್ದಾಗ ಆರೋಪಿಗಳು ಮೋಟರ ಸೈಕಲ್ಲ ಮೇಲೆ ಯಾರನ್ನಾದರೂ ಕರೆದುಕೊಂಡು ಹೋಗಿರುವುದನ್ನು ನಾನು ನೋಡಿಲ್ಲ. ಮಂಜುಳಾ ಪರಿಚಯ ಇಲ್ಲ. ಆಶಾಕಾರ್ಯಕರ್ತೆ ಮಂಜುಳಾಗೆ ಏನು ಆಗಿತ್ತು ಎಂದು ನನಗೆ ಗೊತ್ತಿಲ್ಲ. ಪೊಲೀಸರಿಗೆ ನಾನು ಹೇಳಿಕೆ ಕೊಟ್ಟಿರಲಿಲ್ಲ.

( ಈ ಹಂತದಲ್ಲಿ ಸರ್ಕಾರಿ ಅಭಿಯೋಜಕರ ಕೋರಿಕೆಯ ಮೇರೆಗೆ ಸದರಿ ಸಾಕ್ಷಿದಾರರನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿ ನೀಡಿದೆ.)

ಪಾಟೀ ಸವಾಲುಃ ಸರ್ಕಾರಿ ಅಭಿಯೋಜಕರಿಂದ

**2).** ದಿಃ **16-3-2016** ರಂದು ರಾತ್ರಿ **10** ಗಂಟೆಗೆ ನಾನು ಮತ್ತು ಚಾಸಾ **17** ಕಟ್ಟೆಯ ಮೇಲೆ ಕುಳಿತಿದ್ದೆವು ಎಂದರೆ ಸರಿಯಲ್ಲ. ಆಗ ಆರೋಪಿಗಳು ಒಬ್ಬ ಹೆಣ್ಣುಮಗಳನ್ನು ಮೋಟರ ಸೈಕಲ್ಲ ಮೇಲೆ ಕೂರಿಸುತ್ತಿದ್ದರು ಹಾಗೂ ಆಕೆ ಜೋಲಿ ಹೊಡೆಯುತ್ತಿದ್ದುದನ್ನು ನಾವು ನೋಡಿದೆವು ಎಂದರೆ ಸರಿಯಲ್ಲ. ಆಗ ನಾನು ಗುಂಡಮ್ಮನನ್ನು ಕೇಳಿದಾಗ ಆಕೆ ತನ್ನ ಚಿಕ್ಕಮ್ಮ ಆಗಿದ್ದು ದವಾಖಾನೆಗೆ ಕರೆದುಕೊಂಡು ಹೇಳಿ ಆಕೆಯನ್ನು ಬೈಕ ಮೇಲೆ ಕರೆದುಕೊಂಡು ಹೋದರು ಎಂದರೆ ಸರಿಯಲ್ಲ. ನಂತರ ದಿಃ **19-4-2016** ರಂದು ಪೊಲೀಸರು ನನ್ನನ್ನು ಮತ್ತು ಚಾಸಾ **17** ರವರನ್ನು ಠಾಣೆಗೆ ಕರೆಸಿ ಇಬ್ಬರು ಆರೋಪಿಗಳನ್ನು ತೋರಿಸಿದರು ಎಂದರೆ

ಸರಿಯಲ್ಲ. ಆ ದಿನ ನಾವು ನೋಡಿದ ಮಹಿಳೆ ಮಂಜುಳಾ ಆಗಿದ್ದು ಆರೋಪಿಗಳು ಆಕೆಗೆ ಸ್ಪ್ರೈಟ್ ನಲ್ಲಿ ನಿದ್ರೆ ಮಾತ್ರೆ ಹಾಕಿ ಕುಡಿಸಿ ಕುತ್ತಿಗೆಗೆ ಟವೆಲ್ಲ ಬಿಗಿದು ಕೊಲೆ ಮಾಡಿರುತ್ತಾರೆ ಎಂಬ ವಿಚಾರ ನನಗೆ ಗೊತ್ತಾಯಿತು ಎಂದರೆ ಸರಿಯಲ್ಲ. ನಂತರ ಶವವನ್ನು ಕುರುಬನಾಳ ಸೀಮಾಕ್ಕೆ ತೆಗೆದುಕೊಂಡು ಹೋಗಿ ಸುಟ್ಟರು ಎಂಬ ವಿಚಾರ ಸಹಾ ನನಗೆ ತಿಳಿದುಬಂತು ಎಂದರೆ ಸರಿಯಲ್ಲ. ಇದೇ ರೀತಿ ಪೊಲೀಸರಿಗೆ "ನಾವು ವಾಸಿಸುವ ಮನೆ . . . . ಶವ ಹಾಕಿ ಸುಟ್ಟಿದ್ದು ಇರುತ್ತದೆ " ಎಂದು <u>ನಿಪಿ 6 ರೀತ್ಯ ಹೇಳಿಕೆ</u> ಕೊಟ್ಟಿರುತ್ತೇನೆ ಎಂದರೆ ಸರಿಯಲ್ಲ. ಆರೋಪಿಗಳಿಗೆ ಸಹಾಯ ಮಾಡಲು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

<u>ಪಾಟೀ ಸವಾಲು : ಆರೋಪಿತರ ಪರ ವಕೀಲರಿಂದ</u>

ಆರೋಪಿತರ ಪರ ವಕೀಲರು ಹಾಜರಿದ್ದು, ಪಾಟೀ ಸವಾಲು ಏನೂ ಇರುವುದಿಲ್ಲಾ ಅಂತಾ ತಿಳಿಸಿದ್ದಾರೆ.

ಮರು ವಿಚಾರಣೆ ಇಲ್ಲ.

(ಬಹಿರಂಗ ನ್ಯಾಯಾಲಯದಲ್ಲಿ ನನ್ನ ಉಕ್ತ ಉಲ್ಲೇಖನದ ಮೇರೆಗೆ ಸಾಕ್ಷ್ಯ ಹೇಳಿಕೆಯನ್ನು ಬೆರಳಚ್ಚು ಮಾಡಲಾಯಿತು.)

ಓ ಹೇ ಕೇ ಸರಿ ಇದೆ

(ಚಂದ್ರಶೇಖರ ಸಿ)
ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು
ಕೊಪ್ಪಳ

**CFC.R.P. 67** ಪ್ರಧಾನ **ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ಕೊಪ್ಪಳ.**

Form No.4(Civil)
Deposition

**ಎಸ್.ಸಿ. ನಂ: 25/2017**

**ಪಿ.ಡಬ್ಲ್ಯೂ ನಂ: 09**

**ಸಿಡಬ್ಲ್ಯೂ ನಂ: 17**

**ಸಾಕ್ಷಿಯನ್ನು ದಿನಾಂಕ: 24-07-2025**

**ರಂದು** ಪ್ರತಿಜ್ಞೆ ಬೋಧಿ**ಸಲಾಯಿತು.**

ಸಾಕ್ಷಿದಾರಳ ಹೆಸರು : ಕಲಾವತಿ
ಗಂಡನ ಹೆಸರು : ಹನುಮಂತ
ವಯಸ್ಸು : 35 ವರ್ಷ
ಉದ್ಯೋಗ : ಕೂಲಿ ಕೆಲಸ
ವಾಸಸ್ಥಳ : ಗಿರಿಸಾಗರ

ಸಾಕ್ಷಿಯ ಮುಖ್ಯ ವಿಚಾರಣೆ : ಸರ್ಕಾರಿ ಅಭಿಯೋಜಕರಿಂದಾ.

10 ವರ್ಷಗಳ ಹಿಂದೆ ನಾನು ಕುಷ್ಟಗಿಯಲ್ಲಿ ವಾಸ ಇದ್ದೆ. ಈಗ ನ್ಯಾಯಾಲಯದಲ್ಲಿರುವ ಆರೋಪಿಗಳು ನನಗೆ ಗೊತ್ತಿಲ್ಲ. ಮೃತ ಮಂಜುಳಾ ಪರಿಚಯ ಇಲ್ಲ. 10 ವರ್ಷಗಳ ಹಿಂದೆ ಆರೋಪಿಗಳು ಯಾರನ್ನಾದರೂ ಕರೆದುಕೊಂಡು ಹೋಗಿರುವುದನ್ನು ನಾನು ನೋಡಿಲ್ಲ. ಆರೋಪಿಗಳು ಮತ್ತು ಗುಂಡಮ್ಮನ ಮಧ್ಯ ಮಾತುಕತೆ ಆಯಿತಾ ಎಂಬ ಪ್ರಶ್ನೆಗೆ ನನಗೆ ಯಾರ ಪರಿಚಯವೂ ಇಲ್ಲ ಎಂದು ಸಾಕ್ಷಿದಾರರು ನುಡಿದಿರುತ್ತಾರೆ. ಪೊಲೀಸರು ನನಗೆ ಯಾವುದೇ ವಿಚಾರ ಹೇಳಿರಲಿಲ್ಲ ಮತ್ತು ಆರೋಪಿಗಳನ್ನು ತೋರಿಸಿರಲಿಲ್ಲ. ಪೊಲೀಸರಿಗೆ ನಾನು ಹೇಳಿಕೆ ಕೊಟ್ಟಿರಲಿಲ್ಲ.

( ಈ ಹಂತದಲ್ಲಿ ಸರ್ಕಾರಿ ಅಭಿಯೋಜಕರ ಕೋರಿಕೆಯ ಮೇರೆಗೆ ಸದರಿ ಸಾಕ್ಷಿದಾರನನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿ ನೀಡಿದೆ.)

ಪಾಟೀ ಸವಾಲು: ಸರ್ಕಾರಿ ಅಭಿಯೋಜಕರಿಂದ

2). ದಿ: 16-3-2016 ರಂದು ರಾತ್ರಿ 10 ಗಂಟೆಗೆ ನಾನು ಮತ್ತು ಚಾಸಾ 16 ಕಟ್ಟೆಯ ಮೇಲೆ ಕುಳಿತಿದ್ದೆವು ಎಂದರೆ ಸರಿಯಲ್ಲ. ಆಗ ಆರೋಪಿಗಳು ಒಬ್ಬ ಹೆಣ್ಣುಮಗಳನ್ನು ಮೋಟರ ಸೈಕಲ್ಲ ಮೇಲೆ ಕೂರಿಸುತ್ತಿದ್ದರು ಹಾಗೂ ಆಕೆ ಜೋಲಿ ಹೊಡೆಯುತ್ತಿದ್ದುದನ್ನು ನಾವು ನೋಡಿದೆವು ಎಂದರೆ ಸರಿಯಲ್ಲ. ಅದನ್ನು ಚಾಸಾ 16 ಗುಂಡಮ್ಮನನ್ನು ಕೇಳಿದಾಗ ಆಕೆ ತನ್ನ ಚಿಕ್ಕಮ್ಮ ಆಗಿದ್ದು ದವಾಖಾನೆಗೆ ಕರೆದುಕೊಂಡು ಹೇಳಿ ಆಕೆಯನ್ನು ಬೈಕ ಮೇಲೆ ಕರೆದುಕೊಂಡು ಹೋದರು ಎಂದರೆ

ನನಗೆ ಗೊತ್ತಿಲ್ಲ. ನಂತರ ದಿಃ **19-4-2016** ರಂದು ಪೊಲೀಸರು ನನ್ನನ್ನು ಮತ್ತು ಚಾಸಾ **16** ರವರನ್ನು ಠಾಣೆಗೆ ಕರೆಸಿ ಇಬ್ಬರು ಆರೋಪಿಗಳನ್ನು ತೋರಿಸಿದರು ಎಂದರೆ ಸರಿಯಲ್ಲ. ಆ ದಿನ ನಾವು ನೋಡಿದ ಮಹಿಳೆ ಮಂಜುಳಾ ಆಗಿದ್ದು ಆರೋಪಿಗಳು ಆಕೆಗೆ ಸ್ಪ್ರೈಟ್ ನಲ್ಲಿ ನಿದ್ರೆ ಮಾತ್ರೆ ಹಾಕಿ ಕುಡಿಸಿ ಕುತ್ತಿಗೆಗೆ ಟವೆಲ್ಲ ಬಿಗಿದು ಕೊಲೆ ಮಾಡಿರುತ್ತಾರೆ ಎಂಬ ವಿಚಾರ ನನಗೆ ಗೊತ್ತಾಯಿತು ಎಂದರೆ ಸರಿಯಲ್ಲ. ನಂತರ ಶವವನ್ನು ಕುರುಬನಾಳ ಸೀಮಾಕ್ಕೆ ತೆಗೆದುಕೊಂಡು ಹೋಗಿ ಸುಟ್ಟರು ಎಂಬ ವಿಚಾರ ಸಹಾ ನನಗೆ ತಿಳಿದುಬಂತು ಎಂದರೆ ಸರಿಯಲ್ಲ. ಇದೇ ರೀತಿ ಪೊಲೀಸರಿಗೆ "ನಾವು ವಾಸಿಸುವ ಮನೆ . . . . ಶವ ಹಾಕಿ ಸುಟ್ಟಿದ್ದು ಇರುತ್ತದೆ " ಎಂದು <u>ನಿಪಿ 5 ರೀತ್ಯ ಹೇಳಿಕೆ</u> ಕೊಟ್ಟಿರುತ್ತೇನೆ ಎಂದರೆ ಸರಿಯಲ್ಲ. ಆರೋಪಿಗಳಿಗೆ ಸಹಾಯ ಮಾಡಲು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

<u>ಪಾಟೀ ಸವಾಲು : ಆರೋಪಿತರ ಪರ ವಕೀಲರಿಂದ</u>

ಆರೋಪಿತರ ಪರ ವಕೀಲರು ಹಾಜರಿದ್ದು, ಪಾಟೀ ಸವಾಲು ಏನೂ ಇರುವುದಿಲ್ಲಾ ಅಂತಾ ತಿಳಿಸಿದ್ದಾರೆ.

ಮರು ವಿಚಾರಣೆ ಇಲ್ಲ.

(ಬಹಿರಂಗ ನ್ಯಾಯಾಲಯದಲ್ಲಿ ನನ್ನ ಉಕ್ತ ಉಲ್ಲೇಖನದ ಮೇರೆಗೆ ಸಾಕ್ಷ್ಯ ಹೇಳಿಕೆಯನ್ನು ಬೆರಳಚ್ಚು ಮಾಡಲಾಯಿತು.)

ಓ ಹೇ ಕೇ ಸರಿ ಇದೆ

(ಚಂದ್ರಶೇಖರ ಸಿ)
ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು
ಕೊಪ್ಪಳ